**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .1249/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ನಿಶಾಂತ್ | | **ಚಾ.ಸಾ.-3** |
| **ತಂದೆ/ಗಂಡನ ಹೆಸರು** | - ವೆಂಕಟೇಶ್ | | **ಫ್ರಾ.ಸಾ.-5** |
| **ವಯಸ್ಸು** | - 20 ವರ್ಷ | | |
| **ಉದ್ಯೋಗ** | - ಕೂಲಿ ಕೆಲಸ | | |
| **ವಾಸಸ್ಥಳ** | - ಅಣ್ಣಹಳ್ಳಿದೊಡ್ಡಿ | | |

ದಿನಾಂಕಃ 02-04-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1, 2, 4 ಹಾಗೂ ಮೃತ ಸಿದ್ಧರಾಜುರವರ ಮತ್ತು ಆರೋಪಿಯ ಪರಿಚಯವಿರುವುದಿಲ್ಲ. ಸುಮಾರು 2 ವರ್ಷಗಳ ಹಿಂದೆ ಮದ್ದೂರಿನ ಬಳಿ ಅಪಘಾತವಾಗಿದ್ದು ಸದರಿ ಅಪಘಾತವೂ ಯಾವಾ ರೀತಿ, ಯಾರಾ ತಪ್ಪಿನಿಂದ ಆಯಿತು ಎಂದು ನನಗೆ ನೆನಪಿಲ್ಲ. ನನಗೆ ಸಣ್ಣ ಪುಟ್ಟ ಗಾಯಗಳಾಗಿದ್ದವು. ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿಃ 17-04-2024 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ನೀವು ಮತ್ತು ನ್ಯಾಯಾಲಯದ ಮುಂದೆಯಿರುವ ಆರೋಪಿ ಇಬ್ಬರು ಎಳೆನೀರು ಮಾರುಕಟ್ಟೆಯಲ್ಲಿ ಕೆಲಸ ಮುಗಿಸಿಕೊಂಡು ಕೆಎ-11 ಇವಿ 4945 ಬೈಕ್ ನ್ನು ಆರೋಪಿ ಚಾಲನೆ ಮಾಡಿಕೊಂಡು ನಿಮ್ಮನ್ನು ಹಿಂಬದಿ ಸವಾರನಾಗಿ ಕೂರಿಸಿಕೊಂಡು ಹಲಗೂರು ರುದ್ರಾಕ್ಷಿಪುರದ ಮಾರ್ಗವಾಗಿ ಇಗ್ಗಲೂರು ಗ್ರಾಮದ ಕಡೆಗೆ ಹೋಗುತ್ತಿದ್ದೆವು ಎಂದರೆ ಸರಿಯಲ್ಲ. ಅಣ್ಣಹಳ್ಳಿದೊಡ್ಡಿ ಕೂಳಗೆರೆ ಗೇಟ್ ನಡುವೆಯಿರುವ ಹೈಸ್ಕೂಲ್ ಮುಂಭಾಗದಲ್ಲಿ

ಆರೋಪಿಯು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಎದುರುಗಡೆ ಬೈಕ್ ಗೆ ಡಿಕ್ಕಿಪಡಿಸಿ ಅಪಘಾತಪಡಿಸಿದನು ಎಂದರೆ ಸರಿಯಲ್ಲ. ಅಪಘಾತಕ್ಕೀಡಾದ ಬೈಕ್ ಸವಾರ ಮತ್ತು ನಾನು ಮತ್ತು ಬೈಕ್ ಸವಾರ ಬಿದ್ದು ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಬೈಕ್ ಸವಾರನಾದ ಸಿದ್ಧರಾಜುರವರಿಗೆ ತಲೆಗೆ ಮುಖಕ್ಕೆ ತೀವ್ರತರ ಪೆಟ್ಟಾಗಿ ರಕ್ತಗಾಯುಂಟಾಗಿತ್ತು ಸದರಿ ಬೈಕ್ ಕೆಎ-43-ಹೆಚ್ -2425 ಆಗಿತ್ತು ಎಂದರೆ ಸರಿಯಲ್ಲ. ಅಲ್ಲಿಯೇ ಇದ್ದ ಸಾರ್ವಜನಿಕರು ಈ ಪ್ರಕರಣದ ಆರೋಪಿ ಗಾಯಾಳು ಸಿದ್ಧರಾಜುರವರನ್ನು ಯಾವುದೋ ಒಂದು ವಾಹನದಲ್ಲಿ ಮದ್ದೂರಿನ ಸಿದ್ದೇಗೌಡ ಆಸ್ಪತ್ರೆಗೆ ಕರೆದುಕೊಂಡು ಬಂದು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಚಾಸಾ-4 ರವರು ಗಾಯಾಳು ಸಿದ್ಧರಾಜುರವರನ್ನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿರುತ್ತೀರೀ ಎಂದರೆ ಸರಿಯಲ್ಲ. ನಿಮಗೆ ಸಣ್ಣಪುಟ್ಟ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ದಿಃ 20-02-2024 ರಂದು ರಾತ್ರಿ 09-27 ಸಮಯದಲ್ಲಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಗಾಯಾಳು ಸಿದ್ಧರಾಜುರವರು ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿ.19.04.2024 ರಂದು ಈ ಬಗ್ಗೆ ಪೊಲೀಸರಿಗೆ ನೀವು ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಯು ಒಪ್ಪದ ಕಾರಣ, ಹೇಳಿಕೆಯನ್ನು ನಿಪಿ-19 ಎಂದು ಗುರುತಿಸಲಾಯಿತು. ದಿ.20-04-2024 ರಂದು ಈ ಬಗ್ಗೆ ಪೊಲೀಸರಿಗೆ ನೀವು ಮುಂದುವರೆದ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿಯಲ್ಲ. ಸದರಿ ಮುಂದುವರೆದ ಹೇಳಿಕೆಯನ್ನು ಸಾಕ್ಷಿಯು ಒಪ್ಪದ ಕಾರಣ, ಹೇಳಿಕೆಯನ್ನು ನಿಪಿ-20 ಎಂದು ಗುರುತಿಸಲಾಯಿತು. ನಿಪಿ-19 ಮತ್ತು 20 ರಲ್ಲಿರುವ ವಿಚಾರಗಳು ನಿಮಗೆ ಎಲ್ಲಾ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಏನೂ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.